ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಯಳಂದೂರು.

**CC** 316/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರೇವಣ್ಣೇಗೌಡ ವಿ | ಪ್ರಮಾಣ ಮಾಡಿದ ದಿನಾಂಕ 23.09.2024 |
| ತಂದೆಯ ಹೆಸರು | : | ಲೇಟ್ ವಿರೇಗೌಡ ಎಂ | |
| ವಯಸ್ಸು | : | 39 ವರ್ಷ | |
| ವೃತ್ತಿ | : | ನಾಗರಿಕ ಪೇದೆ | **CW**/4 |
| ವಾಸಸ್ಥಳ | : | ಚಾಮರಾಜನಗರ | **PW**/4 |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು ಕುದೇರು ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 2011 ರಿಂದ ಸೆಪ್ಟೆಂಬರ್ 2017 ರ ವರೆಗೆ ನಾಗರೀಕ ಪೇದೆಯಾಗಿ ಆಗಿ ಕುದೇರು ಪೊಲೀಸ್ ಠಾಣೆಲ್ಲಿ ಕೆಲಸವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 01.04.2017 ರಂದು ನಾನು ಚಾಸಾ–1 ಮತ್ತು 5 ರವರ ಜೊತೆ ಗಸ್ತಿನಲ್ಲಿ ಇದ್ದಾಗ ದೂರವಾಣಿ ಮುಖಾಂತರ ಬಾತ್ಮೀದಾರರಿಂದ **ಚಾಸಾ-1** ರವರಿಗೆ ಒಂದು ಬಾತ್ಮಿ ಬಂದಿರುತ್ತದೆ. ಬಾತ್ಮಿಯ ಪ್ರಕಾರ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡಲು ಮಧ್ಯವನ್ನು ತರುತ್ತಿದ್ದನು. **ಚಾಸಾ-1** ರವರಿಗೆ ಬಾತ್ಮಿ ಬಂದಾಗ ನಾವು ಗಣಗನೂರುಪುರ ಗೊದ್ಲೇಹುಂಡಿಯಲ್ಲಿ ಗಸ್ತಿನಲ್ಲಿ ಇದ್ದೆವು. **ಚಾಸಾ-1 ರವರು ಬಾತ್ಮಿ ವಿಚಾರವನ್ನು ನಮಗೆ ತಿಳಿಸಿರುತ್ತಾರೆ.** ನಮಗೆ ಖಚಿತ ಬಾತ್ಮಿ ಬಂದ ಕಾರಣ ಅದನ್ನು ಹಿಂಬಾಲಿಸಿ ಬರುತ್ತಿದ್ದಾಗ ಗಣಗನೂರುಪುರ ಸಂತೇಮಾಳದ ಹತ್ತಿರ ಚಾಸಾ–2 ಮತ್ತು 3 ರವರನ್ನು ಕರೆದು ಅವರಿಗೂ **ಚಾಸಾ-1** ರವರು ತಮಗೆ ಬಂದ ಬಾತ್ಮಿಯನ್ನು ತಿಳಿಸಿ ದಾಳಿಗೆ ಹೋಗಬೇಕಾಗುತ್ತದೆ ಎಂದು ಹೇಳಿ ಅವರನ್ನು ಪಂಚರಾಗುವಂತೆ ಕೇಳಿಕೊಂಡಿರುತ್ತಾರೆ. ಅದಕ್ಕೆ ಅವರು ಒಪ್ಪಿದ ಕಾರಣ ಅವರುಗಳನ್ನು ಸಹ ನಮ್ಮ ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಕಾರಾಪುರ ಮುಖ್ಯ ರಸ್ತೆಗೆ ಬಂದಾಗ ನ್ಯಾಯಾಲಯದ ಮುಂದಿರುವ ಆರೋಪಿತನು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದು ಅನುಮಾನಾಸ್ಪದವಾಗಿ ನಿಂತಿದ್ದನು. ನಾವು ಸಮವಸ್ತ್ರದಲ್ಲಿ ಇದ್ದ ಕಾರಣ ನಮ್ಮನ್ನು ನೋಡಿ ಗಾಬರಗೊಂಡು ಓಡಿ ಹೋಗಲು ಪ್ರಯತ್ನಿಸಿರುತ್ತಾನೆ. ನಾವು ಅವನನ್ನು ಓಡಿ ಹೋಗಲು ಬಿಡದೆ ಹಿಡಿದಿರುತ್ತೇವೆ. ನಂತರ ಆರೋಪಿತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಕಿತ್ತುಕೊಂಡು ಅದನ್ನು ಪರಿಶೀಲಿಸಿದಾಗ ಅದರಲ್ಲಿ

180 **M.L** ನ ಓಲ್ಡ್ ಟವರಿನ್ ವಿಸ್ಕಿಯ **5** ಪೌಚುಗಳು, **90** **M.L** ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ **30** ಪೌಚುಗಳು ಕಂಡುಬಂದಿರುತ್ತವೆ, ಆರೋಪಿತನು ಇವುಗಳ ಸ್ವಾಧೀನಕ್ಕೆ ಯಾವುದೇ ಪರವಾನಗಿಯನ್ನು ಹಾಜರುಪಡಿಸಿರುವುದಿಲ್ಲ. **ಚಾಸಾ-1** ರವರು ಪಂಚರ ಸಮಕ್ಷಮ ನಿಪಿ–1 ರಂತೆ ಮಹಜರ್ ಮಾಡಿ ಎಲ್ಲಾ ಮಧ್ಯದ ಪ್ಯಾಕುಗಳನ್ನು ಜಪ್ತುಪಡಿಸಿಕೊಂಡು ಬಿಳಿ ಬಟ್ಟೆಗಳಿಂದ ಪ್ರತ್ಯೇಕವಾಗಿ ಹೊಲಿದು **K** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತಾರೆ. ಸಾಕ್ಷಿಯು ಆಗ ಮಧ್ಯ ತುಂಬಿತ್ತು ಎನ್ನಲಾದ ಈಗ ಖಾಲಿ ಇರುವ **35** ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ, ಅವುಗಳನ್ನು ಈಗಾಗಲೇ ಮುದ್ದೇಮಾಲು–1 ರಿಂದ **35** ಎಂದು ಗುರುತಿಸಲಾಗಿದೆ. ಸಾಕ್ಷಿಯು ಮುದ್ದೇಮಾಲುಃ–**36** ನ್ನು ಸಹ ನೋಡಿ ಗುರುತಿಸಿರುತ್ತಾರೆ. ಪಂಚನಾವೆಯನ್ನು ಸಂಜೆ **5–45** ರಿಂದ **6–45** ರ ವರೆಗೆ ಮಾಡಲಾಗಿರುತ್ತದೆ. ನಿಪಿ–1 ನ್ನು **ಚಾಸಾ-1** ರವರು ಚಾಸಾ–2 ಮತ್ತು **3** ರವರಿಗೆ ಓದಿ ಹೇಳಿ ನಂತರ ಅವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿ ಮತ್ತು ಮಾಲಿನ ಸಮೇತ ಪೊಲೀಸ್ ಠಾಣೆಗೆ ರಾತ್ರಿ **8–30** ಗಂಟೆಗೆ ಬಂದು ಘಟನೆಯ ಬಗ್ಗೆ ಸ್ವ ವರದಿಯನ್ನು ತಯಾರು ಮಾಡಿ **ಚಾಸಾ-1** ರವರೇ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸದರಿ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ಘಟನೆ ನಡೆದ ಮಾರನೆ ದಿನ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ **MNS**ರವರಿಂದಃ

ನಾವು ಆದಿನ ಗಸ್ತಿಗೆ ಹೋಗಲು ಮಧ್ಯಾಹ್ನ 3 ಗಂಟೆಗೆ ಪೊಲೀಸ್ ಠಾಣೆಯನ್ನು ಬಿಟ್ಟಿರುತ್ತೇವೆ. ನಾನು, **ಚಾಸಾ-1** ಮತ್ತು 5 ರವರು ಗಸ್ತಿಗಾಗಿ ಹೋಗಿರುತ್ತೇವೆ. ಪೊಲೀಸ್ ಠಾಣೆಯ ದಿನಚರಿ ಪುಸ್ತಕದಲ್ಲಿ ನಾವು ಗಸ್ತಿಗೆ ಹೋಗುವಾಗ ಸಹಿಯನ್ನು ಮಾಡಿರುವುದಿಲ್ಲ ಆದರೆ ಠಾಣಾಧಿಕಾರಿಯು ವಿವರವನ್ನು ನಮೂದು ಮಾಡಿರುತ್ತಾರೆ. ನಾವು ಮೊದಲು ಗಸ್ತಿಗಾಗಿ ಹಳ್ಳಿಕೆರೆ ಹುಂಡಿಗೆ ಹೋಗಿರುತ್ತೇವೆ, ನಂತರ ಗಣಗನೂರು, ಸೊತ್ತನಹುಂಡಿ, ಗೊದ್ಲೇಹುಂಡಿ ಕಡೆಗಳಿಗೆ ಹೋಗಿರುತ್ತೇವೆ. ನಾವು ಗೊದ್ಲೇಹುಂಡಿಗೆ ಹೋದಾಗ ಸಮಯ ಸುಮಾರು ಸಂಜೆ 5 ಗಂಟೆ. ಅಲ್ಲಿಂದ ನಾವು ಗಣಗನೂರಿಗೆ ಬಂದಾಗ ಸಮಯ ಸುಮಾರು ಸಂಜೆ **5-20.** ನಾವು ಸ್ವಲ್ಪ ಸಮಯದಲ್ಲಿ ಸುಮಾರು 5 ನಿಮಿಷಗಳ ಕಾಲದಲ್ಲಿ ಪಂಚರನ್ನು ಗಣಗನೂರಿಗೆ ಕರೆದುಕೊಂಡು ಹೋಗಿರುತ್ತೇವೆ, ಚಾಸಾ-2 ಮತ್ತು 3 ರವರು ಸಂತೇಮಾಳದಲ್ಲಿ ಇದ್ದರು. ಚಾಸಾ-1 ರವರು ಚಾಸಾ-2 ಮತ್ತು 3 ರವರಿಗೆ ಲಿಖಿತವಾಗಿ ನೋಟಿಸ್ ನೀಡಿರುವುದಿಲ್ಲ. ಗಣಗನೂರಿನಿಂದ ನಾವು ನೇರವಾಗಿ ಕಾರಾಪುರ ಕ್ರಾಸ್‌ಗೆ ಹೋಗಿರುತ್ತೇವೆ. ಗಣಗನೂರಿನಿಂದ ಕಾರಾಪುರ ಕ್ರಾಸ್ ಸುಮಾರು 2 ಕಿ.ಮೀ ಅಂತರದಲ್ಲಿ ಇದೆ. ಕಾರಾಪುರ ಕ್ರಾಸ್ ನಲ್ಲಿ ಬಸ್ ನಿಲ್ದಾಣ, ಆಸ್ಪತ್ರೆ ಮತ್ತು ಅಂಗಡಿಗಳು ಇವೆ ಎಂದು

ಸೂಚಿಸಿದರೆ ನಿಜ. ಸದರಿ ಸ್ಥಳವು ಜನ ಸಂದಣಿ ಪ್ರದೇಶ ಎಂದರೆ ನಿಜ ಸಾಕ್ಷಿಯು ಮಂದುವರಿದು ಆ ಸಮಯದಲ್ಲಿ ಜನ ಇರಲಿಲ್ಲ ಎಂದು ನುಡಿಯುತ್ತಾರೆ. ಕಾರಾಪುರ ಕ್ರಾಸ್‌ನಿಂದ ಹಳ್ಳಿಕೆರೆಹುಂಡಿಗೆ ನಡೆದುಕೊಂಡು ಹೋಗಬಹುದು ಎಂದರೆ ನಿಜ. ನಾವು ಆರೋಪಿತನನ್ನು ಹಿಡಿದೆವು ಎನ್ನಲಾದ ಸ್ಥಳದ ಸುತ್ತಾಮುತ್ತ ಮನೆಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಕೇವಲ ಜಮೀನುಗಳು ಇವೆ ಎಂದು ನುಡಿಯುತ್ತಾರೆ. ಕಾರಾಪುರ ಕ್ರಾಸ್ ನ ಬಳಿ ಹಿಟ್ಟಿನ ಗಿರಣಿ ಇದೆ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ಬಲಗಡೆಗೆ ಇದ್ದ. ಸದರಿ ರಸ್ತೆಯು ಕಾರಾಪುರ ಗ್ರಾಮಕ್ಕೆ ಹೋಗುವ ರಸ್ತೆಯಾಗಿತ್ತು, ಎಡಕ್ಕೆ ಶಿವರುದ್ರಪ್ಪ ರವರ ಜಮೀನು ಇದೆ. ವಾಸು ಎಂಬ ಪೊಲೀಸ್ ಸಿಬ್ಬಂದಿ ನಿಪಿ-1ನ್ನು ಬರೆದಿರುತ್ತಾರೆ. ವಾಸು ರವರು ನಿಪಿ-1ಕ್ಕೆ ಸಹಿಯನ್ನು ಮಾಡಿರುವುದಿಲ್ಲ. ನಿಪಿ-1ಕ್ಕೆ ಚಾಸಾ-2,3, ಆರೋಪಿ, ಚಾಸಾ-1 ಮತ್ತು 5 ರವರುಗಳು ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ನಿಪಿ-1 ನ್ನು ಬರೆದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಸ್ಥಳದಲ್ಲಿ ನಿಪಿ-1ಕ್ಕೆ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಚಾಸಾ-2 ಮತ್ತು 3 ರವರನ್ನು ಗಣಗನೂರು ಗ್ರಾಮದಿಂದ ಕರೆದುಕೊಂಡು ಹೋಗಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನಾನು ಹೇಳಿದ ಹಾಗೆ ಕಾರಾಪುರ ಕ್ರಾಸ್ ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಯಾವುದೇ ಗಸ್ತಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಧಿಕಾರಿಯ ಪ್ರಭಾವಕ್ಕೆ ಒಳಗಾಗಿ ಈ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಆರೋಪಿತನಿಂದ ಯಾವುದೇ ಮಧ್ಯವನ್ನು ಮತ್ತು ಚೀಲವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೇಮಾಲುಗಳಿಗೂ ಆರೋಪಿತನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

23.09.2024.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.